

**ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್‌ನ ವಾಲ್ಟ್‌ನಲ್ಲಿ ನಾಲ್ಕನೆ ಸ್ಥಾನ ಪಡೆದ ದೀಪಾ ಕರ್ಮಾಕರ್**

120 ಕೋಟಿ ಜನಸಂಖ್ಯೆಯುಳ್ಳ ಭಾರತ ಆ ಎರಡು ಪದಕಗಳ ವಿಜಯದಲ್ಲಿ ತೇಲಿಹೋಯಿತು. ಮಂದಿರಗಳಲ್ಲಿ ಪೂಜೆ ಪುನಸ್ಕಾರಗಳು, ಬೀದಿಗಳಲ್ಲಿ ಪಟಾಕಿ, ಸಿಹಿ ವಿತರಣೆ, ಕ್ರೀಡಾಸಂಸ್ಥೆಗಳ ಬೆನ್ನು ತಟ್ಟಿಕೊಳ್ಳುವಿಕೆ, ಅಭಿನಂದಿಸುವ ನೆಪದಲ್ಲಿ ಮಂತ್ರಿ ಮಹೋದಯರ ಭಾಷಣಗಳು .. ಹೀಗೆ ದೊಡ್ಡ ಪಟ್ಟಿಯೇ ಬೆಳೆಯುತ್ತಿದೆ.

ಒಂದೇ ಒಂದು ಕಂಚಿನ ಪದಕ 11 ದಿನಗಳ ನಿರಾಸೆಯನ್ನು ಮರೆಸಿಬಿಡುತ್ತದೆ. ಅದೇ ನಮ್ಮ ಪಾಲಿಕೆ ಚಿನ್ನವಾಗಿಬಿಡುತ್ತದೆ. ಹೊಗಳಿಕೆಗಳು ಪುಂಖಾನುಪುಂಖವಾಗಿ ಕೇಳಿಬರುತ್ತವೆ. ನಮ್ಮ ದೇಶದಲ್ಲಿ ಸೋತಾಗ ಹತ್ತು ಕಲ್ಲು ಹೆಚ್ಚು ಬೀಸುತ್ತಾರೆ. ಅದಕ್ಕಿಂತಲೂ ಅಪಾಯಕಾರಿಯಾಗಿ ಗೆಲುವನ್ನು ವೈಭವಿಕರಿಸುತ್ತಾರೆ. ಕೆಲವೇ ದಿನಗಳಲ್ಲಿ ಎಲ್ಲವನ್ನೂ ಮರೆಯುತ್ತಾರೆ. ಈ ದೇಶದಲ್ಲಿ ಕ್ರಿಕೆಟ್ ಹೊರತುಪಡಿಸಿದರೆ ಇಂತಹದೊಂದು ಅಭೂತಪೂರ್ವ ಸ್ಪಂದನೆ ಸಿಗುವುದು ಒಲಿಂಪಿಕ್ಸ್ ನಡೆದಾಗ ಮಾತ್ರ. ಇಂತಹದೊಂದು ಸಂಚಲನವನ್ನು ಮತ್ತೆ ಕಾಣಲು ಇನ್ನು ನಾಲ್ಕು ವರ್ಷ ಕಾಯಬೇಕು.

ವಿಜ್ಞಾನ, ತಂತ್ರಜ್ಞಾನ, ವಾಣಿಜ್ಯ, ಆಧುನಿಕತೆಗಳಲ್ಲಿ ಮುಂದುವರಿಯುತ್ತಿರುವ ಭಾರತ ಕ್ರೀಡಾ ಕ್ಷೇತ್ರದಲ್ಲಿಯೂ ಸಾಧನೆಯನ್ನು ಕಾಣಲು ನಾವೆಷ್ಟು ಹಸಿದು ಕುಳಿತಿದ್ದೇವೆ ಎಂಬುದರ ಪ್ರತಿಬಿಂಬ ಇದು. ಆದರೆ, ಅದಕ್ಕೆ ಪೂರಕವಾದ ವ್ಯವಸ್ಥೆ ನಮ್ಮಲಿದೆಯೇ? ನಮ್ಮ ಪಕ್ಕದ ಚೀನಾ ಪದಕಗಳ ಸೂರೆ ಮಾಡಬಹುದಾದರೆ ನಮಗೇಕೆ ಸಾಧ್ಯವಿಲ್ಲ? ಭಾರತಕ್ಕಿಂತಲೂ ಪುಟ್ಟದಾಗಿರುವ ದೇಶಗಳು ಹತ್ತಕ್ಕೂ ಹೆಚ್ಚು ಪದಕ ಗಳಿಸಬಹುದಾದರೆ ನಮಗೇಕೆ ಆಗುತ್ತಿಲ್ಲ? ಮೈಕೆಲ್ ಫೆಲ್ಪ್ಸ್ ರೀತಿಯ ಈಜುಗಾರರು, ಉಸೇನ್ ಬೋಲ್ಟ್ ಅವರಂತಹ ಓಟಗಾರರು, ಎಲೈನ್ ಥಾಮ್ಸನ್ ಅವರಂತಹ ಛಲಗಾತಿಯರು, ಸಿಮೊನ್ ಬೈಲ್ಸ್ ಅವರಂತಹ ಜಿಮ್ನಾಸ್ಟ್‌ಗಳು ಇಲ್ಲಿ ಏಕೆ ಸಿದ್ಧರಾಗುತ್ತಿಲ್ಲ? 2020ಯಲ್ಲಿ ಬಲಿಷ್ಠ ಭಾರತ ನಿರ್ಮಾಣದ ಕನಸು ಕಾಣುತ್ತಿರುವ ಸರ್ಕಾರದ ಯೋಜನೆಯಲ್ಲಿ ಕ್ರೀಡೆಯ ಸುಧಾರಣೆಗೂ ಅವಕಾಶವಿದೆಯೇ?

ಇಂತಹ ಹತ್ತು ಹಲವು ಪ್ರಶ್ನೆಗಳನ್ನು ಇದೀಗ ಮುಕ್ತಾಯವಾದ ರಿಯೊ ಒಲಿಂಪಿಕ್ಸ್ ಬಿಟ್ಟು ಹೋಗಿದೆ. ಆತ್ಮಾವಲೋಕನದ ಸೂಚನೆಯನ್ನೂ ನೀಡಿ ಹೋಗಿದೆ.

## ಆರಕ್ಕೇರದ ಭಾರತ

2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಆರು ಪದಕ ಗೆದ್ದಿದ್ದು ಭಾರತದ ಇದುವರೆಗಿನ ಶ್ರೇಷ್ಠ ಸಾಧನೆ. 119 ಕ್ರೀಡಾಪಟುಗಳ ತಂಡವನ್ನು ಈ ಬಾರಿ ಕಳಿಸಿದ್ದು ಕೂಡ ದೊಡ್ಡ ಮೈಲುಗಲ್ಲು. ಅದರಿಂದಾಗಿಯೇ ರಿಯೊದಲ್ಲಿ ಕನಿಷ್ಠ 10 ಪದಕಗಳನ್ನು ಗೆಲ್ಲುವುದು ಖಚಿತ ಎಂಬ ನಿರೀಕ್ಷೆ ಮೂಡಿತ್ತು. ಕ್ರೀಡಾ ಸಚಿವಾಲಯವೇ ಈ ಮಾತು ಹೇಳಿತ್ತು. ಆದರೆ ಲಂಡನ್ ಸಾಧನೆಯ ಅರ್ಧದಷ್ಟು ಸಾಧಿಸಲು ಹೆಣಗಾಡಬೇಕಾಯಿತು.

ಬಾಕ್ಸಿಂಗ್, ಬ್ಯಾಡ್ಮಿಂಟನ್, ಟೆನಿಸ್, ಶೂಟಿಂಗ್, ಹಾಕಿ, ಆರ್ಚರಿ, ಕುಸ್ತಿ ಕ್ರೀಡೆಗಳಲ್ಲಿ ಪದಕದ ನಿರೀಕ್ಷೆ ಇತ್ತು. ಆದರೆ,